
ಕಂಜೂಸ್ ಗಂಡ ಹೆಂಡತಿ



ಶರತ್ ಶೆಟ್ಟಿ ಪಡುಪಳ್ಳಿ

ಒಂದಾನೊಂದು ಊರಿನಲ್ಲಿ ಅತೀ ಜಿಪುಣ ಗಂಡಹೆಂಡತಿ ಇದ್ದರಂತೆ.ಆದರೂ ಅವರಿಗೆ ದಿನವೂ ಮೀನಿನ ಪರಿಮಳದ ಊಟ ಬೇಕೇ ಬೇಕು!. ಅದಕ್ಕಾಗಿ ಅವರು ಒಂದು ಒಣಮೀನನ್ನು ನೂಲಿನಿಂದ ಮನೆಯ ಮಾಡಿಗೆ ನೇತು ಹಾಕಿ ಅದರ ಪರಿಮಳ ಮೂಸುತ್ತಾ ಉಣ್ಣುತ್ತಿದ್ದರಂತೆ. ಇನ್ನು ದೇವರಿಗೆ ಇಟ್ಟ ಅಗರಬತ್ತಿಯನ್ನೂ ಸ್ವಲ್ಪವೇ ಉರಿಸಿ ಆರಿಸುತ್ತಿದ್ದರಂತೆ. ಹೀಗಿರುವಾಗ ಒಮ್ಮೆ ಗಂಡನಿಗೆ ಅಲ್ಲೇ ಸ್ವಲ್ಪ ದೂರ ನೆಡೆಯುತ್ತಿದ್ದ ಹರಿಕಥೆಗೆ ಹೋಗುವ ಮನಸ್ಸಾಯಿತಂತೆ. ಹಾಗೇ ಹೆಂಡತಿಗೆ ಹೇಳಿ ಹೊರಟ. ಸುಮಾರು ದೂರ ಹೋದ ಮೇಲೆ ಅವನಿಗೆ ಚಿಮಿಣಿ ದೀಪ ಆರಿಸದೆ ಬಂದದ್ದು ನೆನಪಾಯಿತು. ಇನ್ನು ಒಂದು ವೇಳೆ ಹೆಂಡತಿ ಹಾಗೇ ಮಲಗಿದರೆ ಚಿಮಿಣಿ ಎಣ್ಣೆ ಸುಮಾರು ಕಾಲಿಯಾಗಬಹುದು ಎಂದು ಕೂಡಲೇ ಹಿಂದುರಿಗಿ ಬಂದ. ಹಾಗೆ ಬಂದವನನ್ನು ನೋಡಿದ ಹೆಂಡತಿ ವಿಷಯ ಕೇಳಿದಳು ಆಗ ಇವ ಹೇಳಿದ ವಿವರಣೆ ಕೇಳಿ ಆಕೆ ಹೇಳಿದಳು. ನೀವು ಅಂಗಳಕ್ಕೆ ಇಳಿದ ಕೂಡಲೇ ನಾನು ಚಿಮಿಣಿ ಆರಿಸಿದ್ದೆ ಮತ್ತೆ ಅಂದಾಜಲ್ಲೇ ಎಲ್ಲವನ್ನೂ ಮಾಡಿದೆ ಎಂದು. ಮತ್ತೆ ಹೇಳಿದಳು. ಅಲ್ಲ ನೀವು ಅದಕ್ಕಾಗಿ ಮತ್ತೆ ಹಿಂದೆ ಬಂದಿರಲ್ವಾ ನಿಮ್ಮ ಚಪ್ಪಲಿ ಎಷ್ಟು ಸವೆದಿರಬಹುದು ಎಂದು!? ಅದಕ್ಕೆ ಆತನೆಂದ, ನೀನು ಹೆಚ್ಚು ಜಾಣಳೆನಿಸಬೇಡ ನಾನು ಮರಳಿ ಬರುವಾಗ ಚಪ್ಪಲಿ ಕೈಯಲ್ಲಿ ಹಿಡಿದು ಬರೀಗಾಲಲ್ಲೇ ಬಂದೆ ಎಂದು..

ಕಥೆಯ ನೀತಿ- ಕೆಲವೊಮ್ಮೆ ಉಳಿತಾಯ ಬೇಕು. ಆದರೆ ಈ ರೀತಿಯದ್ದಲ್ಲ. ದೇವರು ಕೊಟ್ಟ ಅಲ್ಪ ಆಯುಷ್ಯದಲ್ಲಿ ತಾನು ಸುಖವಾಗಿ ತಿಂದುಂಡು, ಸಾಧ್ಯವಾದರೆ ಪರರಿಗೆ ಇತ್ತು ಬದುಕುವುದು ಮನುಷ್ಯನ ಲಕ್ಷಣ. ವಿಪರ್ಯಾಸವೆಂದರೆ ಇಂತವರು ಕೆಲವರು ಈಗಲೂ ಇದ್ದಾರೆ. ಬೇಸರದ ಸಂಗತಿ. ಆದರೂ ಪೂರ್ವ ಜನ್ಮದ ಪ್ರಾರಾಭ್ಧ ಕರ್ಮ ಮೀರಲು ಅಸಾಧ್ಯ ಏನಂತೀರೀ?!.